Doc-441
T-P-2

Reg No B G 155 20 — 5 — 72

55th Year of Publication ‡ 'Satyavadi' daily, Mysore 4

In the Sta'e – The First
Golden Jubilee
Celebrated Paper
★
News, Views, Dharmic
Moral Ethical Matters

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂಭ್ರಮಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪಾರ್ಲಿಮೆಂಟ್ ಸದಸ್ಯರಿಂದ ಸಮಿತಿ ನಿರ್ಮಾಣ

ಉಲ್ಲಂಘಿಸಲು ಕರೆ

ಉತ್ತರ ವಿಯೆಟ್ನಾಂ ರೇವುಗಳ ಮೇಲೆ ಅಮೇರಿಕ ದಿಗ್ಬಂಧನವನ್ನು ಉಲ್ಲಂಘಿಸಲು ಉತ್ತರ ವಿಯಟ್ನಾಂ ಸಾಮಾನು ತುಂಬಿದ ಬಲ್ಗೇರಿಯಾ ಹಡಗು ಟೈಂಕೊಂಟ್ಸೇರ್ ಕೊಪ್ಪಕ್ಕೆ ಆಜ್ಞೆ ಮಾಡಿದೆ

★

ಗಲ್ಲಿಗೆ ರಿಸಲಾಯಿತು

1970 ರಲ್ಲಿ ತನ್ನ ಪತ್ನಿಯ ಪ್ರೇಮಿಯನ್ನು ಕೊಲೆ ಮಾಡಿದ 29 ವಯಸ್ಸಿನ ಥಾಮಾಸ್ ನಿನ್ನೆ ತಿರುವೇಂದ್ರದಲ್ಲಿ ಗಲ್ಲಿಗೇರಿಸಲ್ಪಟ್ಟನು. ಅವನು ತನ್ನ ಕಣ್ಣನ್ನು ನೇತ್ರ ಬ್ಯಾಂಕಿಗೂ, ಸ್ವಲ್ಪ ರಕ್ತವನ್ನು ರಕ್ತ ಬ್ಯಾಂಕಿಗೂ, ಜೀಹವನ್ನು ವೈದ್ಯಕೀಯ ಕಾಲೇಜಿಗೆ ಕೊಯ್ಯುವ ಸಲುವಾಗಿ ದಾನ ಇತ್ತನು.

★

ಎರಡು ಸಹಸ್ರ ನಿರ್ವಾಸಿಕರು

ಮಂಡ್ಯ ಜಿಲ್ಲೆ ದೊಡ್ಡಗೌಡನ ಕೊಪ್ಪಲಿನಲ್ಲಿ ಮಂಗಳವಾರ ಆದ ಭೂಕಂಪನದಿಂದ 2 ಸಾವಿರ ಮಂದಿ ನಿರ್ವಾಸಿಕರಾಗಿದ್ದಾರೆ. ಅವರು ವೊಟ್ಟಿ ಜೋಪಡಿಗಳನ್ನು ಹೊಲಗದ್ದೆಗಳು ಹಾಗೂ ಬಹಿರಂಗ ಸ್ಥಳಗಳಲ್ಲಿ ಹಾಕಿಕೊಂಡಿರುವರು.

ನಾಮಪತ್ರ ಸಲ್ಲಿಕೆ

ಶಾಸನ ಸಭೆಯ ಹುಣಸೂರು ಕ್ಷೇತ್ರದ ಉಪ ಚುನಾವಣೆಗೆ ಮುಖ್ಯ ಮಂತಿ ಶ್ರೀ ಡಿ. ದೇವರಾಜ ಅರಸರು ನಾಮಪತ್ರ ಸಲ್ಲಿಸಿರುವರು. ಇತರ 9 ಮಂದಿ ಸಹ ಸಲ್ಲಿಸಿರುವರು.

ಯೋಜನಾ ಹಣದಲ್ಲಿ ಖೋತಾ

ನಾಲ್ಕನೆ ಯೋಜನೆಯ ಬಂಡವಾಳವು ನಾನೂರು ಕೋಟಿ ಖೋತಾ ಆಗಿರುವುದಾಗಿ ಲೋಕಸಭೆಯಲ್ಲಿ ತಿಳಿಸಲಾಯಿತು.

ಸೂರ್ಯ ತಾಪ ವಿಪರೀತ

ವಿಜಯವಾಡಾದಲ್ಲಿ ಸೂರ್ಯನ ತಾಪ ಭೀಕರವಾಗಿದೆ ಮೂರು ದಿನಗಳಿಂದ ಯಾರೂ ಬೀದಿಯಲ್ಲಿ ಸುಳಿಯುತ್ತಿಲ್ಲ ಕೂಲಿ ಮಾರುವವರು ಯಾರೂ ಹೆದರಿ ಈಚೆಗೆ ಬರುತ್ತಿಲ್ಲ.

★ ಭಾರತ ಆಹಾರ ಕಾರ್ಪೊರೇಷನ್ ಮೈಸೂರಿಗೆ 5 ತಿಂಗಳ ವರಿಗೆ ಪ್ರತಿ ತಿಂಗಳು 2 ಸಾವಿರ ಟನ್ ಒಳ್ಳೆಯ ಅಕ್ಕಿ ಸರಬರಾಜು ಮಾಡಲು ಇಚ್ಚಿಸಿದೆ ಎಂದು ಆಹಾರ ಸಹಾಯ ಮಂತ್ರಿ ಶ್ರೀಮತಿ ಈವಾ ವಾಸ್ ಹೇಳಿರುವರು.

ಹೇಳಿಕೆಗಳಿಂದ ಗೊಂದಲ

ರಾಜ್ಯದ ಮಂತ್ರಿಗಳು ಭೂ ಪರಿಮಿತಿ ಬಗ್ಗೆ ಹಾಗೂ ವಿರುದ್ಧ ಹೇಳಿಕೆಗಳನ್ನು ಇತ್ತು ಜನರಿಗೆ ಗೊಂದಲವನ್ನುಂಟು ಮಾಡುತ್ತಿರುವರೆಂದು ಶಾಸನ ಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಹೆಚ್. ಡಿ ದೇವೇಗೌಡರು ಹಾಸನದಲ್ಲಿ ತಿಳಿಸಿದರು ಪ್ಲಾಂಟೇಷನ್‌ಗಳಿಗೆ ಪರಿಮಿತಿ ಇಲ್ಲವೆಂದು ಒಬ್ಬರು ನುಡಿದರೆ, ಅದಕ್ಕೆ ವಿನಾಯಿತಿ ಇಲ್ಲವೆಂದು ಮತ್ತೊಬ್ಬರು ಹೇಳುವರೂ ಎಂದರು.

★

ಭೂಮಿಯ ಹಂಚಿಕೆ

ಸರ್ಕಾರದ ಸರ್ವ ವ್ಯವಸಾಯಾರ್ಹ ಭೂಮಿಯು ಮುಂದಿನ ವರ್ಷ ಮಾರ್ಚಿಯೊಳಗೆ ಭೂಮಿ ಇಲ್ಲದವರಿಗೆ ಹಂಚಲಾಗುವುದು ಎಂದು ಕಂದಾಯ ಮಂತ್ರಿ ಶ್ರೀ ಹುಚ್ಚುಮಾಸ್ತಿ ಗೌಡರು ಕಾರವಾರದಲ್ಲಿ ತಿಳಿಸಿದರು

★

ಮಂತ್ರಿಯವರ ಎಚ್ಚರಿಕೆ

ಆರೋಗ್ಯ ಮಂತ್ರಿ ಶ್ರೀ ಹೆಚ್. ಸಿದ್ಧವೀರಪ್ಪನವರು ಚಿತ್ರದುರ್ಗದ ಆಸ್ಪತ್ರೆಗೆ ಇತ್ತೀಚೆಗೆ ಭೇಟಿ ಕೊಟ್ಟು ಎಲ್ಲವನ್ನು ಪರೀಕ್ಷಿಸಿದರು ರೋಗಿಗಳನ್ನು ಅಗೌರವ ಅಥವಾ ಅಜಾಗರೂಕತೆಯಿಂದ ಉಪಚರಿಸುವ ವೈದ್ಯರುಗಳ ಮೇಲೆ ಸರ್ಕಾರ ತೀವ್ರ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

★

ನೇಮಕ

ಭಾರತ ಸರ್ಕಾರ ಉಪಯೋಗಿಸುತ್ತಿರುವ ಅಶೋಕ ಚಕ್ರವು ಖುಗ್ವೇದದಲ್ಲಿ ತಿಳಿಸಲಾಗಿದೆ ಎಂದು ಪ್ರೊ|| ಜಿ ಎಸ್ ಚಕ್ರವರ್ತಿಯವರು ಮೈಸೂರಿನ ಸರ್ವ ಭಾಷಾ ಸರಸ್ವತಿ ಸಂಘದಲ್ಲಿ ತಿಳಿಸಿದರು

ಶಾಸಕಸ್ಥ ಸಮಿತಿ ರಚನೆ

ಮೈಸೂರು ಮಹಾರಾಷ್ಟ್ರ ಗಡಿ ವ್ಯಾಜ್ಯ ಪರಿಹಾರಕ್ಕೆ ಮಹಾಜನ ಆಯೋಗ ಶಿಫಾರಸುಗಳನ್ನು ಜಾರಿಗೆ ತರಬೇಕೆಂದು ಪ್ರಧಾನಿಯವರಿಗೆ ಮೈಸೂರು ಪಾರ್ಲಿಮೆಂಟ್ ಸದಸ್ಯರು ಕೊಡಬೇಕೆಂತಿರುವ ಮನವಿ ಪತ್ರ ತಯಾರಿಸಲು 3 ಮಂದಿ ಸದಸ್ಯರ ಸಮಿತಿ ರಚಿಸಿರಾಗಿದೆ.

○

ಅತಿ ದೊಡ್ಡ ಅಣೆಕಟ್ಟು

ಕ್ಲಾಡೆನ್ನೋ (ಯುಗೊಸ್ಲೋವಿಯ)— ಯೂರೋಪಿನ ಅತ್ಯಂತ ದೊಡ್ಡ ಅಣೆಕಟ್ಟು ಮತ್ತು ವಿದ್ಯುತ್ ಉತ್ಪಾದನಾ ಪ್ರಾಜೆಕ್ಟನ್ನು ಯುಗೊಸ್ಲೋವಿಯ ಅಧ್ಯಕ್ಷ ಟೀಟೋ ಮತ್ತು ರುಮೇನಿಯಾ ಅಧ್ಯಕ್ಷ ನಿಕೋಲಿಯರು ಉದ್ಘಾಟಿಸಿದರು.

★

ಡೈರಿ ಇನ್‌ಸ್ಪೆಕ್ಷನ್

ಮೈಸೂರು— ನಗರದಲ್ಲಿ ನಿರ್ಮಿಸಲಾಗುತ್ತಿರುವ ರೂ 76.70 ಲಕ್ಷದ ಹಾಲಿನ ಡೈರಿಯನ್ನು ಪಶುಸಂಗೋಪನ ಸ್ಟೇಟ್ ಮಂತ್ರಿ ಶ್ರೀ ಎಲ್ ಚಿಕ್ಕೇಗೌಡರು ಇನ್‌ಸ್ಪೆಕ್ಷನ್ ಮಾಡಿದರು — ನಗರಾಭಿವೃದ್ಧಿಧ್ಯಕ್ಷ ಶ್ರೀ ಕೆ. ಎಸ್. ಸೋಮಸುಂದರಂರವರ ಜೊತೆಯಲ್ಲಿದ್ದರು.

★

ಮಾತೃಭಾಷೆಯಲ್ಲಿ ಶಿಕ್ಷಣ

ಮೈಸೂರು— ರಾಜ್ಯದ ವಿದ್ಯಾಭ್ಯಾಸ ಇಲಾಖಾ ಕಾರ್ಯದರ್ಶಿ ಶ್ರೀ ಸಾಮ್ಯುಲ್ ಅಪ್ಪಾಜಿಯವರು, ಮಾತೃಭಾಷೆಯಲ್ಲಿ ಶಿಕ್ಷಣದಿಂದ ವಿದ್ಯಾಭ್ಯಾಸವು ಹೆಚ್ಚು ಪರಿಣಾಮಕಾರಿಯೂ, ಹೆಚ್ಚು ಜ್ಞಾನೋಭೆಯೂ ಆಗುವುದೆಂದು ಮಾನಸಗಂಗೋತ್ರಿ ಕನ್ನಡ ವ್ಯಾಸಂಗ ಭಾಗ ಪ್ರಕಟಿಸಿದ ಪುಸ್ತಕ ಬಿಡುಗಡೆ ಮಾಡುತ್ತಾ ಹೇಳಿದರು

★

ಇರುವೆಗಳಿಂದ ಶಸ್ತ್ರ ಚಿಕಿತ್ಸೆ

ರಷ್ಯಾದಲ್ಲಿನ ಕೀಟ ವಿಜ್ಞಾನಿ ಮರೀಕೊವೆಸ್ಕಿಯವರು ಸೋವಿಯತ್ ಮಧ್ಯ ಏಷ್ಯದ ಗಣರಾಜ್ಯಗಳಲ್ಲಿಂದಾದ ಕಿಷ್ಟೀಜಿಯದಲ್ಲಿ ತೇರೆನ್ಸಯಿ ಅಲಾತ್ತಾ ಬೆಟ್ಟ ಗಳಲ್ಲಿ ಕೀಟ ಜೀವನದ ಸ್ವಾರಸ್ಯಕರ ದೃಶ್ಯಗಳನ್ನು ಕಂಡಿದ್ದಾರೆ. ಕೆಂಪು ತಲೆಯ ಇರುವೆಗಳಲ್ಲಿ ಒಂದು ರೋಗಿ ಇರುವೆಯ ಚಿಕಿತ್ಸೆಯನ್ನು ಅವರು ನೋಡಿದ್ದಾರೆ ಇರುವೆಗಳು ತಮ್ಮ ರೋಗಿಯನ್ನು ಜಾಗರೂಕತೆಯಿಂದ ತಮ್ಮ ಗೂಡಿನ ಮುಂದಿನ ಚೌಕಕ್ಕೆ ತಂದವು ರೋಗಿಯ ದೇಶದಿಂದ ಅತ್ಯಂತ ಸೂಕ್ಷ್ಮವಾದ ಚೂರನ್ನು ಅವು ಹೊರಗೆ ತೆಗೆಯತೊಡಗಿದವು. ಎರಡು ಅಥವಾ ಮೂರು "ಶಸ್ತ್ರಚಿಕಿತ್ಸೆ" ಇರುವೆಗಳು ಈ ಕೆಲಸದಲ್ಲಿ ತೊಡಗಿದ್ದವು : ಬೇರೆ ಇರುವೆಗಳು ಅವುಗಳಿಗೆ ಸಹಾಯ ಮಾಡುತ್ತಿದ್ದವು ; ಈ ಶಸ್ತ್ರ ಚಿಕಿತ್ಸೆಯು ಅನೇಕ ಗಂಟೆಗಳ ಕಾಲ ನಡೆಯಿತು.

★

ದು ಬಾರಿ ಗಡಿಯಾರ

ಕಲ್ಕತ್ತೆಯ ಹೊಸ ನೂರುಕಟ್ಟಿಯ ಗಂಟೆ ಗೋಪುರದ ಮೇಲಿನ 9 ಟನ್ ಭಾರದ ಗಡಿಯಾರ ಕಳೆದ 5 ವರ್ಷಗಳಿಂದ ನಿಂತಿತ್ತು ; ಈಗ ಟಿಕ್ ಟಿಕ್ ಅನ್ನುತ್ತಿದೆ ; ರಿಪೇರಿಗಾಗಿ ಕೇವಲ ರೂ 8 ಸಾವಿರ ವೆಚ್ಚವಾಗಿದೆಯೆಂದು ಕಾರ್ಪೊರೇಷನ್ ಅಧಿಕಾರಿಯೊಬ್ಬರು ತಿಳಿಸುತ್ತಾರೆ.

ವುಡ್‌ಲ್ಯಾಂಡ್ 19-5-72ರಿಂದ ಆಮೋಘ 3ನೇ ವಾರ

.... ಚಿತ್ರಾಕರ್ಷ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ : ರಾಜಶ್ರೀ ಸಹೋದರರು ನಿರ್ಮಾಪಕರು : ಎಂ ಜೆ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಮಹಾಸತಿ ಅರುಂಧತಿ

ಅಪೂರ್ವ 2 ನೇ ವಾರ

.... ಮನಮೋಹಕ ಕನ್ನಡ ಚಿತ್ರ ....

ಭಲೇ ರಾಣಿ

ನಟವರ್ಗ— ಉದಯಕುಮಾರ್, ಶ್ರೀನಾಥ್, ಅಶ್ವತ್ಥ್, ದಿವಂಗತ ನಾಗಪ್ಪ
ಶಕ್ತಿಪ್ರಸಾದ್, ರಮೇಶ್, ತೂಗುದೀಪ ಶ್ರೀನಿವಾಸ್, ಪಂಡರೀಬಾಯಿ
ದೇವಿಕ, ರಮಾದೇವಿ, ಬೇಬಿ ರಾಣಿ, ಮೈಸೂರಿನ ಪೈ ॥ ಮೂಗ
ದಿನ 3 ಆಟಗಳು

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಷೇಧವಾಗಲಿ

Edited Printedand Published by Dharmapracharanirata
M S Krishna Rao (Propretor) at the Satvavadi Press
Chamarajapuram Mysore 4

"ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ 'ಕಲ್ಪನೆ'
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

ಅನೆ - ಹುಡುಗ

Protect the Cow

Contribute Liberally
to the National Defence Fund

Help The Gorakshana



— Humanitarian Propoganda Monthly ....

Quality Printing Neat Binding

Lakshminarasimha Press
Sivarampet, Mysore

SHAKTI
SUDHA

A Superb Tonic